# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
| --- | --- |
| ಶ್ರೀ ಶೇಖರರಾಜ ಎಸ್ ತಂದೆ ದಿ॥ ಶಿಡಿಗಿನಮೊಳ ತಿಪ್ಪಣ್ಣ | ಕಂದಾಯ ಪರಿವೀಕ್ಷಕರು, ಮೋಕಾ |

**ವಿಷಯ:**-ಬಳ್ಳಾರಿ ತಾಲೂಕು ಮೋಕಾ ಹೋಬಳಿ ಸಿಂಧುವಾಳ ಗ್ರಾಮದ ಸರ್ವೆ ನಂ:204/ಎ ವಿಸ್ತೀರ್ಣ:7.45, 362/ಡಿ/2ಎ ವಿಸ್ತೀರ್ಣ:1.00 ಎಕರೆ ಜಮೀನಿನ ವಿಚಾರಣೆ ಕುರಿತು.

******

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಸಿಂಧುವಾಳ ಗ್ರಾಮದ ಸರ್ವೆ ನಂ:204/ಎ ವಿಸ್ತೀರ್ಣ:7.45, 362/ಡಿ/2ಎ ವಿಸ್ತೀರ್ಣ:1.00 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀ ಶಿಡಿಗಿನಮೋಳ ತಿಪ್ಪಣ್ಣ ಇವರು ದಿನಾಂಕ:06-01-2014 ರಂದು ಮೃತಪಟ್ಟಿರುತ್ತಾರೆ ಕಾರಣ ಪೌತಿ ವಾರಸುದಾರರು ಪೌತಿ ಹಕ್ಕು ಬದಲಾವಣೆಗೆ ಮನವಿಯನ್ನು ಸಲ್ಲಿಸಿರುತ್ತಾರೆ ಅದರಂತೆ ಕಂದಾಯ ನಿರೀಕ್ಷಕರು ಮೋಕಾ ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಲಾಗಿ ನಿಗದಿತ್ತ ಅವದಿಯಲ್ಲಿ ಯಾವುದೇ ಆಕ್ಷೇಪಹಣೆಗಳು ಬಂದಿರುವುದಿಲ್ಲ. ವಂಶವೃಕ್ಷವನ್ನು ಸಲ್ಲಿಸಿರದ ಕಾರಣ ಸದ್ರಿ ಪೌತಿ ಹಕ್ಕು ಬದಲಾವಣೆ ಕಡತವನ್ನು ತಿರಸ್ಕರಿಸಿ ಇತ್ಯರ್ಥ ವಿಚಾರಣೆನಡೆಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:28-03-2016, 18-04-2016 ಮತ್ತು 16-05-2016 ರಂದು ವಿಚಾರಣೆಗೆ ಕರೆಯಲಾಗಿ ಅರ್ಜಿದಾರರು ಪ್ರಕಾರಣಕ್ಕೆ ಹಾಜರಾಗಿ ವಂಶವೃಕ್ಷವನ್ನು ಸಲ್ಲಿಸಿರುತ್ತಾರೆ ಸದ್ರಿ ವಂಶವೃಕ್ಷದ ಪ್ರಕಾರ ದಿವಂಗತ ಶ್ರೀ ಶಿಡಿಗಿನಮೋಳ ತಿಪ್ಪಣ್ಣ ಇವರಿಗೆ 1)ಗಾದಿಲಿಂಗಪ್ಪ 2)ಶೇಖರ್ ರಾಜ್ 3)ಗಾದೆಮ್ಮ ಎಂದು ಮೂರು ಜನ ಮಕ್ಕಳದ್ದು ಶ್ರೀಮತಿ ಗಾದೆಮ್ಮ ಇವರಿಗೆ ಮದುವೆಯಾಗಿದ್ದು ತನ್ನ ಇಬ್ಬರು ಸಹೋದರರ ಹೆಸರಿಗೆ ಖಾತೆ ಮಾಡಲು ತನ್ನ ಒಪ್ಪಿಗೆ ಇರುವುದಾಗಿ ಅಫಿಡೆವಿಟ್ ಸಲ್ಲಿಸಿರುತ್ತಾರೆ ಆದ್ದರಿಂದ ಈ ಕಾರಣ ಈಕೆಳಗಿನಂತೆ ಆದೇಶ.

**-::ಆದೇಶ::-**

**ಸಂ/ಕಂ/ವಿವಾದ/ 85 /2016-17** **ದಿನಾಂಕ: 6 / 6 /2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ :-ಬಳ್ಳಾರಿ ತಾಲೂಕು ಮೋಕಾ ಹೋಬಳಿ ಸಿಂಧುವಾಳ ಗ್ರಾಮದ ಸರ್ವೆ ನಂ:204/ಎ ವಿಸ್ತೀರ್ಣ:7.45, 362/ಡಿ/2ಎ ವಿಸ್ತೀರ್ಣ:1.00 ಎಕರೆ ಜಮೀನು ಶ್ರೀ ಗಾದಿಲಿಂಗಪ್ಪ ತಂದೆ ಶಿಡಿಗಿನಮೊಳ ತಿಪ್ಪಣ್ಣ, ಶ್ರೀ ಶೇಖರಾಜ ಎಸ್ ತಂದೆ ದಿ॥ ಶಿಡಿಗಿನಮೊಳ ತಿಪ್ಪಣ್ಣ ಇವರ ಹೆಸರಿಗೆ ಜಂಟಿ ಪೌತಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 6-6-2016 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

6/6/16
ತಹಶೀಲ್ದಾರರು
ಬಳ್ಳಾರಿ
ತಹಶೀಲ್ದಾರರು, ಬಳ್ಳಾರಿ
Tasildar, Bellary.

8/6/16 ರವಾನಿಸಲಾಗಿದೆ.

G. Ramesh

**ಪ್ರತಿಯನ್ನು:**

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ.